ಆಹಾ ಸುದ್ದಿ!

★ ಸಸಿತೋಟ

ರಷ್ಯಾದ ಚಾನೆಲ್ ಒಂದು ರಿಯಾಲಿಟಿ ಶೋ 'ಗೇಮ್2' ಆರಂಭಿಸಿದೆಯಂತೆ. ಕಾಡಿನಲ್ಲಿ 9 ತಿಂಗಳುಗಳ ಕಾಲ ಇರಬೇಕು. ನಿಯಮದ ಪ್ರಕಾರ ಹೊಡೆದಾಟ, ಮದ್ಯ ಸೇವನೆ, ಕೊಲೆ, ಅತ್ಯಾಚಾರ.. ಹೀಗೆ ಎಲ್ಲದಕ್ಕೂ ಅವಕಾಶವಿದೆ. ಆದರೆ ಕಾನೂನು ಪ್ರಕಾರ ಅಪರಾಧ ಎಂದು ಸಾಬೀತಾದರೆ ಪೊಲೀಸರು ಬಂಧಿಸುವರು ಎಂದು ಎಚ್ಚರಿಕೆ ಕೊಡಲಾಗಿದೆಯಂತೆ. ಹೊಡೆದಾಟ, ಕೊಲೆ, ಅತ್ಯಾಚಾರ ಬಿಟ್ಟು ಇನ್ನು ಯಾವುದು ಅಪರಾಧವೋ!



ಮೇರಿಲ್ಯಾಂಡ್‌ನ ರೈತನೊಬ್ಬ ತಾನು ಸಾಕಿದ ಕೋಳಿಗಳಿಗೆ ವಾದ್ಯಗಳ ಪರಿಚಯವನ್ನೂ ಮಾಡಿಸಿದ್ದಾನಂತೆ. ಇವು ಆಲ್ ಇನ್ ಒನ್. ಆರ್ಕೆಸ್ಟ್ರಾ ಬ್ಯಾಂಡ್‌ನಲ್ಲಿ ಎಲ್ಲವೂ ಹಾಡುತ್ತವೆ, ಎಲ್ಲವೂ ವಾದ್ಯಗಳನ್ನು ನುಡಿಸುತ್ತವೆ. ಕೊನೆಗೆ ಪಾರ್ಟಿಯಲ್ಲಿ ಪ್ಲೇಟಲ್ಲೂ ಖಾದ್ಯವಾಗಿ ಕೂರುತ್ತವೆ.



ಗೌಹಾತಿಯ ಇಂಡಿಯನ್ ಆಯಿಲ್ ಕೊಳವೆ ಮಾರ್ಗದಲ್ಲಿ ಸಿಕ್ಕ 20 ಅಡಿ ಉದ್ದದ ಹೆಬ್ಬಾವು. ಇದುವರೆಗೆ ಮನುಷ್ಯರು ಮಾತ್ರ ತೈಲ ಕುಡಿದು ಕುಡಿದು ದೊಡ್ಡ ವ್ಯಕ್ತಿಗಳಾಗಿದ್ದನ್ನು ಕೇಳಿದ್ದೆವು. ಆದರೆ ಈಗ ಹೆಬ್ಬಾವಿಗೂ ಈ ಹುಕಿ ಏಕೆ ಬಂತೋ!



ಅರಿಝೋನಾದ ಯೋಗ ಶಿಕ್ಷಕಿ ಏಪ್ರಿಲ್ ಗೌಲ್ಡ್ ಬ್ಯುಸಿನೆಸ್ ಇಲ್ಲದೇ ಯಾವಾಗಲೂ ಶವಾಸನ ಮಾಡುತ್ತಿದ್ದಳಂತೆ. ಆಕೆ ಸಾಕಿದ 7–8 ಆಡುಗಳು ಯೋಗ ವಿದ್ಯಾರ್ಥಿಗಳಿಗೆ 'ಗೋಗಾ' (ಗೋಟ್ ಯೋಗ) ಕಲಿಸಲು ಶುರು ಮಾಡಿದವಂತೆ. ಈಗ ಆಕೆ ಗಲ್ಲಾಪೆಟ್ಟಿಗೆಯಲ್ಲಿ 'ಹಣ'ಯೋಗ ಮಾಡುತ್ತಿರಬಹುದು.



ನ್ಯೂಜಿಲೆಂಡ್‌ನ ಯುವತಿ ಹನ್ನಾ ಹಸುವಿನ ಸವಾರಿ ಮಾಡುವುದನ್ನು ಕಲಿತಿದ್ದಾಳಂತೆ. ಪೋಷಕರು ಕುದುರೆ ಸವಾರಿಗೆ ಅನುಮತಿ ಕೊಡಲಿಲ್ಲವಂತೆ. ಹೀಗಾಗಿ ಹಸುವನ್ನೇ ಪಳಗಿಸಿದ್ದಾಳಂತೆ. ನೀನಾರಿಗಾದೆಯೋ ಎಲೆ ಮಾನವ ಹಾಡಿಗೆ ಸಣ್ಣದೊಂದು ತಿದ್ದುಪಡಿಗೆ ಹನ್ನಾ ಮುನ್ನುಡಿ ಬರೆದಿದ್ದಾಳೆ.

ಇಂಗ್ಲೆಂಡ್‌ನಲ್ಲಿ ತೆರಿಗೆ ಪಾವತಿಸಲು ಜನವರಿ 31 ಕೊನೆಯ ದಿನವಂತೆ. ಕರ ಪಾವತಿಸದವರು ಕಳೆದ ವರ್ಷ ಕೊಟ್ಟ ಸಬೂಬುಗಳನ್ನು ಸೇರಿಸಿದರೆ ದೊಡ್ಡ ಜೋಕ್ ಬುಕ್ಕೇ ಆಗುತ್ತದೆ. ಒಬ್ಬಾತ ತನ್ನ ಹೆಂಡತಿಗೆ ತಲೆನೋವು ಎಂಬ ಕಾರಣ ಕೊಟ್ಟರೆ, ಇನ್ನೊಬ್ಬ ದಾಖಲೆಗಳ ಮೇಲೆ ಕಡಜೀರಿಗೆ ಹುಳ ಗೂಡು ಕಟ್ಟಿದೆ ಎಂದನಂತೆ. ತಲೆನೋವು ಈಗ ಇಲಾಖೆ ಅಧಿಕಾರಿಗೆ ಬಂದಿದೆಯಂತೆ.